


ಬೆಟ್ಟದಲ್ಲಿ ಅರಳಿರುವ
ಐಜ್ವಾಲ್ ನಗರ

14 ಲಕ್ಷಕ್ಕೆ ಏರಿದ್ದರೆ ಅದು ಸಹಜ. ಆದರೆ, ಈಗ 20 ಲಕ್ಷದ ಮೇಲಿದೆ. ಈ ಪ್ರಮಾಣದಲ್ಲಿ ಜನರ ಸಂಖ್ಯೆ ಹೆಚ್ಚಲು ನುಸುಳುಕೋರರೇ ಕಾರಣ ಎಂದು ಸ್ಥಳೀಯ ಪತ್ರಕರ್ತ ಲಾಲ್‌ಮಾಲ್‌ಸವುಮ ಈ ಆತಂಕದ ಹಿನ್ನೆಲೆಯನ್ನು ವಿವರಿಸಿದರು.

ಬಾಂಗ್ಲಾದಿಂದ ಬಂದವರನ್ನು ಪತ್ತೆ ಹಚ್ಚುವುದು ಕಷ್ಟವಾಗುವುದಿಲ್ಲ. ಯಾಕೆಂದರೆ ಅವರ ಮುಖಚರ್ಯೆಯಿಂದಲೇ ಅವರು ಮಿಜೋ ಜನರಲ್ಲ ಎಂದು ಗೊತ್ತಾಗುತ್ತದೆ. ಆದರೆ, ಮ್ಯಾನ್ಮಾರ್‌ನವರೇ ನಮಗೆ ದೊಡ್ಡ ಸಮಸ್ಯೆ. ನಮ್ಮಂತೆ ಅವರೂ ಮಂಗೋಲಿಯನ್ ರೇಸ್‌ಗೆ (ಜನಾಂಗಕ್ಕೆ) ಸೇರಿದವರಾಗಿರುವುದರಿಂದ ಮುಖಚರ್ಯೆಯಿಂದ ಗೊತ್ತಾಗುವುದಿಲ್ಲ. ಮ್ಯಾನ್ಮರ್‌ನಲ್ಲಿ ಆಡಳಿತಾತ್ಮಕವಾಗಿ ಆಂತರಿಕ ಪ್ರಕ್ಷುಬ್ಧತೆ ಉಂಟಾಗುತ್ತಿರುವುದರಿಂದ ಅಲ್ಲಿಂದ ಮಿಜೋರಾಂ ಕಡೆಗೆ ಬರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಬರ್ಮೀಸ್‌ಗಳಲ್ಲಿಯೂ ಚಿನ್ ಸಮುದಾಯದವರೇ ಹೆಚ್ಚಾಗಿ ವಲಸೆ ಬರುತ್ತಿದ್ದಾರೆ. ಹೊಸ ರೈಲು ಮಾರ್ಗ ಪೂರಕವಾದರೆ ಅವರೇ ಬಹುಸಂಖ್ಯಾತರಾಗುವ ಅಪಾಯ ಮುಂದೆ ಬರಲಿದೆ ಎಂದು ಲಾಲ್‌ಮಾಲ್‌ಸವುಮ ಸಮಸ್ಯೆಗಳನ್ನು ಬಿಚ್ಚಿಟ್ಟರು.

### ಮಿಜೋ ಇತಿಹಾಸ

ಮಿಜೋರಾಂಗೆ ದೊಡ್ಡ ಇತಿಹಾಸ ಇದೆಯೇ ಎಂದು ಕೇಳಿದರೆ ಇಲ್ಲವೆಂದೂ ಇಲ್ಲವೇ ಎಂದರೆ ಇದೆಯೆಂದೂ ಹೇಳುವ ವಿಚಿತ್ರ ಪ್ರದೇಶ ಇದು. ಮಿಜೋರಾಂ ಎನ್ನುವ ಹೆಸರೇ ಇತ್ತೀಚಿನದ್ದು. ಲುಶೈ ಜಿಲ್ಲೆಯಾಗಿದ್ದ ಈ ಪ್ರದೇಶವು 1987ರಲ್ಲಿ ರಾಜ್ಯವಾಗಿ ಉದಯಿಸಿದಾಗ ಮಿಜೋರಾಂ ಎಂದು ಹೆಸರಿಡಲಾಗಿತ್ತು.

ಬ್ರಿಟಿಷರು ಭಾರತಕ್ಕೆ ಬಂದು ಆಡಳಿತ ನಡೆಸುತ್ತಿದ್ದಾಗ ಲುಶೈ ಪ್ರದೇಶವನ್ನು ಅವರ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿದ್ದರು. ಬಳಿಕ ಅಲ್ಲಿನ ಬಹುತೇಕ ಬುಡಕಟ್ಟುಗಳು ಕ್ರಿಶ್ಚಿಯನ್‌ಗೆ ಮತಾಂತರಗೊಂಡವು. ಹಾಗಾಗಿ ಮಿಜೋರಾಂನಲ್ಲಿ ಶೇ 87ರಷ್ಟು ಜನರು ಕ್ರಿಶ್ಚಿಯನ್ನರು. ಅವರ ಇತಿಹಾಸ 150 ವರ್ಷಗಳ ಈಚಿನದ್ದಾಗಿದೆ.

ಮಿಜೋರಾಂನ ವಾಂಗ್ಚಿಯಾ ಪ್ರದೇಶದಲ್ಲಿ ಕ್ರಿಸ್ತಪೂರ್ವ 600 ವರ್ಷಗಳ ಹಿಂದೆಯೇ ನಾಗರಿಕತೆ ಇತ್ತು ಎಂಬುದಕ್ಕೆ ಪುರಾತತ್ವ ಪುರಾವೆಗಳು ಸಿಕ್ಕಿವೆ. ಆದರೂ ಟಿಬೆಟೊ–ಬರ್ಮನ್ ಭಾಷೆ ಮಾತನಾಡುವ ಜನರು ಆರು ಶತಮಾನಗಳ ಹಿಂದೆ ಮ್ಯಾನ್ಮಾರ್‌ನ ಚಿನ್ ಬೆಟ್ಟಗಳಿಂದ ಬೇರೆ ಬೇರೆ ಗುಂಪುಗಳು ಬಂದು ಲುಶೈ ಬೆಟ್ಟಗಳಲ್ಲಿ ನೆಲೆಸಲು ಆರಂಭಿಸಿದ ಬಳಿಕದ ಇತಿಹಾಸವೇ ಮಿಜೋ ಅಧಿಕೃತ ಚರಿತ್ರೆಯಾಗಿದೆ. ಜುಮು ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ವಾಸವಾಗತೊಡಗಿದ್ದರು. ಬೆಟ್ಟದ ಜನರು ಎಂಬರ್ಥ ಇರುವ ‘ಮಿಜೋ’ ಪದವನ್ನು ಎಲ್ಲ ಬುಡಕಟ್ಟುಗಳು ತಮ್ಮ ಅಸ್ಮಿತೆಯನ್ನಾಗಿ ಮಾಡಿಕೊಂಡರು. ‘ಸಖುವಾ’ ಎಂಬ ಬಹುದೇವತಾ ಆರಾಧನೆಯ ಧರ್ಮ ಇವರದ್ದಾಗಿತ್ತು. ಬ್ರಿಟಿಷರು ಬಂದ ಮೇಲೆ ಎಲ್ಲ ಬುಡಕಟ್ಟುಗಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿರುವುದರಿಂದ ‘ಸಖುವಾ’ ಧರ್ಮವೇ ನಶಿಸಿ ಹೋಗಿದೆ. ಈಗ ಒಂದೆರಡು ಸಾವಿರ ಜನರಷ್ಟೇ ಸಖುವಾ ಧರ್ಮದವರಿದ್ದಾರೆ.

ಭಾರತವು ಸ್ವತಂತ್ರಗೊಂಡಾಗ ಲುಶೈ ಬೆಟ್ಟಗಳ ಜಿಲ್ಲೆಯಾಗಿ ಅಸ್ಸಾಂನ ಭಾಗವಾಯಿತು. ಬರಗಾಲ ಬಂದಾಗ ಅಸ್ಸಾಂ ಸರ್ಕಾರವು ಲುಶೈ ಬೆಟ್ಟದ ಜನರನ್ನು ನಿರ್ಲಕ್ಷಿಸಿತು ಎಂಬ ಕಾರಣಕ್ಕೆ ಮಿಜೋ ನ್ಯಾಷನಲ್ ಫ್ರಂಟ್ ಸಂಘಟನೆಯ ನೇತೃತ್ವದಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ 1960ರಲ್ಲಿ ಹೋರಾಟ ಆರಂಭವಾದವು. ಹೋರಾಟ ಹಿಂಸೆಗೆ ತಿರುಗಿ ಹಲವರು ಮೃತಪಟ್ಟಿದ್ದರು. ದಂಗೆಯನ್ನು ಅಡಗಿಸಲು ಅಸ್ಸಾಂ ಸರ್ಕಾರ ಮತ್ತು ಕೇಂದ್ರ ಸರ್ಕಾರ ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಕೊನೆಗೆ ಶಾಂತಿ ಒಪ್ಪಂದದೊಂದಿಗೆ 1987ರಲ್ಲಿ ಪ್ರತ್ಯೇಕ ರಾಜ್ಯ ‘ಮಿಜೋರಾಂ’ ಉದಯವಾಯಿತು.

ಪ್ರತಿಕ್ರಿಯಿಸಿ: feedback@sudha.co.in

### ಗಡಿಗಳು

ಮಿಜೋರಾಂ ರಾಜ್ಯದ ಪಶ್ಚಿಮಕ್ಕೆ ಬಾಂಗ್ಲಾದೇಶ, ಪೂರ್ವ ಮತ್ತು ದಕ್ಷಿಣಕ್ಕೆ ಮ್ಯಾನ್ಮಾರ್ ದೇಶಗಳಿವೆ. 722 ಕಿಲೋ ಮೀಟರ್ ಅಂತರರಾಷ್ಟ್ರೀಯ ಗಡಿಯನ್ನು ಈ ಎರಡು ದೇಶಗಳೊಂದಿಗೆ ಮಿಜೋರಾಂ ಹಂಚಿಕೊಂಡಿದೆ.

ಉತ್ತರದಲ್ಲಿ ಅಸ್ಸಾಂ, ವಾಯುವ್ಯದಲ್ಲಿ ತ್ರಿಪುರ, ಈಶಾನ್ಯ ಭಾಗದಲ್ಲಿ ಮಣಿಪುರ ರಾಜ್ಯಗಳು ಮಿಜೋರಾಂನೊಂದಿಗೆ ದೇಶೀಯ ಗಡಿಯನ್ನು ಹಂಚಿಕೊಂಡಿದೆ. ರಾಜ್ಯವು ಒಟ್ಟು 21,081 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ.